ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ:ದ:ನ್ಯಾ:ದಂ.,ರವರು, ಕಡೂರು.

ದಿನಾಂಕ:**22.01.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ವಾದಿಯರ ಪರ ಶ್ರೀ ಹೆಚ್ ಎನ್ ಎಸ್ ವಕೀಲರಿಂದ:-

ನನ್ನ ಅಜ್ಜನ (ತಂದೆಯ ತಂದೆ) ಹೆಸರು ದೊಡ್ಡ ಹನುಮಯ್ಯ, ಅವರಿಗೆ ಆನಂತಯ್ಯ, ರಂಗಯ್ಯ, ದಾಸಪ್ಪ ಮತ್ತು ಹನುಮಂತಯ್ಯ ಎಂಬ 4 ಜನ ಗಂಡು ಮಕ್ಕಳು ಹಾಗೂ ಶಾರದಮ್ಮ ಮತ್ತು ಮತ್ತೊಬ್ಬರು ಒಟ್ಟು 2 ಜನ ಹೆಣ್ಣು ಮಕ್ಕಳು ಇರುತ್ತಾರೆ. ಇನ್ನೊಬ್ಬರ ಹೆಸರು ನನಗೆ ನೆನಪಿಲ್ಲ, ಅವರು ಈಗ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ ನಾನು ಮತ್ತು ನನ್ನ ಅಣ್ಣ ಇಬ್ಬರು ಗಂಡು ಮಕ್ಕಳು, ಹೆಣ್ಣು ಮಕ್ಕಳು ಇರುವುದಿಲ್ಲ.

ನನ್ನ ತಂದೆ ಹೊಸದುರ್ಗದ ನೊಂದಾಣಾಧಿಕಾರಿಯವರ ಕಛೇರಿಯಲ್ಲಿ ರಂಗಯ್ಯ ರವರಿಗೆ ನನ್ನನ್ನು ದತ್ತು ನೀಡಿರುತ್ತಾರೆ ಎಂದರೆ ಸರಿ. ರಂಗಯ್ಯರವರು ವ್ಯವಸಾಯಗಾರರು ಎಂದರೆ ಸರಿ, ಅವರು ಈಗ ಜೀವಂತವಿಲ್ಲ. ನನ್ನ ದೊಡ್ಡಪ್ಪ ಆನಂತಯ್ಯ ರವರು ಈಗ ಜೀವಂತವಿಲ್ಲ, ಅವರು ಶಾಲೆಯ ಮುಖ್ಯ ಶಿಕ್ಷಕರಾಗಿ ನಿವೃತ್ತಿ ಹೊಂದಿರುತ್ತಾರೆ. ಸದರಿ ಆನಂತಯ್ಯ ರವರಿಗೆ ಬಸವರಾಜು ಮತ್ತು ಕೃಷ್ಣ ಮೂರ್ತಿ ಎಂಬ ಇಬ್ಬರು ಮಕ್ಕಳು. ಸದರಿ ಬಸವರಾಜು ರವರು ನಿವೃತ್ತಿ ರೈಲೆ ಇಲಾಖಾ ನೌಕರ ಹಾಗೂ ಕೃಷ್ಣಮೂರ್ತಿ ರವರು ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆನಂತಯ್ಯ ರವರು ಕಾಂತರಾಜು ಎಂಬಾತನ್ನು ದತ್ತು ಮಗನಾಗಿ ಸ್ವೀಕರಿಸಿದ್ದರು ಎಂದರೆ ಸರಿ.

ಹನುಮಂತಪ್ಪ ರವರು ನಿವೃತ್ತ ಫಾರ್ಮ್ಾಸಿಸ್ಟ್ ಆಗಿರುತ್ತಾರೆ, ಅವರ ಹೆಂಡತಿ ಜಯಮ್ಮ ನಿವೃತ್ತ ಶಾಲಾ ಶಿಕ್ಷಕಿ. ಇವರಿಗೆ ಅನಿಲ್‌ಕುಮಾರ್ ಮತ್ತು ಚಂದನ ಇಬ್ಬರು ಮಕ್ಕಳು, ಅವರಿಬ್ಬರು ಡಾಕ್ಟರ್ ಆಗಿರುತ್ತಾರೆ. ಅನಿಲ್‌ಕುಮಾರ್ ಮತ್ತು ಚಂದನ ರವರನ್ನು ರಂಗಯ್ಯ ರವರು ದತ್ತು ಸ್ವೀಕರಿಸಿದ್ದರು ಎಂದರೆ ಸರಿಯಲ್ಲ.

ನನ್ನ ತಂದೆ ರಂಗಯ್ಯ ರವರು ವ್ಯವಸಾಯ ಮಾಡುವುದರಿಂದ ಆದಾಯ ಕಡಿಮೆ ತೋರಿಸಿ, ನನ್ನನ್ನು ಬಿಡಿಎಸ್ ಪದವಿಗೆ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನನಗೆ ಎಂ ಡಿ ಎಸ್ ಪದವಿಯನ್ನು ಸಹಃ ರಂಗಯ್ಯ ರವರು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ನೈಸರ್ಗಿಕ ತಂದೆ ದಾಸಪ್ಪ ರವರು ಮಾಡಿಸಿರುತ್ತಾರೆ. ರಂಗಯ್ಯ ರವರು ನಾನು ಅವರ ಆಸ್ತಿಗೆ ತೊಂದರೆ ಕೊಡಬಾರದು ಎಂದು ದತ್ತು ಸ್ವೀಕಾರ ಪತ್ರವನ್ನು ರದ್ದುಪಡಿಸಿರುತ್ತಾರೆ ಎಂದರೆ ಸರಿಯಲ್ಲ.

ರಂಗಯ್ಯ ರವರಿಗೆ ಇಬ್ಬರು ಗಂಡು ಮಕ್ಕಳು ಇದ್ದು, ಅವರ ಪೈಕಿ ಮಾರುತಿ ಎಂಬ ಮಗ ಮೊದಲೇ ಮೃತಪಟ್ಟಿದ್ದು, ಕೋವಿಡ್ ಅವಧಿಯಲ್ಲಿ ಚಿದಾನಂದ ಎಂಬಾತ ಮೃತಪಟ್ಟಿರುತ್ತಾನೆ.

ರಂಗಯ್ಯ ರವರಿಗೆ ಮಕ್ಕಳು ಇದ್ದ ಕಾರಣ ನನ್ನನ್ನು ದತ್ತು ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ರಂಗಯ ರವರು ನನ್ನ ಅಣ್ಣ ಶ್ರೀನಿವಾಸರವರನ್ನು ಸಹ ದತ್ತು ಪಡೆದಿದ್ದರು ಎಂದರೆ ಸರಿಯಲ್ಲ.

ನನ್ನ ನೈಸರ್ಗಿಕ ತಂದೆಯು ನನ್ನ ವಿದ್ಯಾಭ್ಯಾಸ ಮಾಡಿಸುವ ಉದ್ದೇಶದಿಂದ ನನ್ನ ದೊಡ್ಡಪ್ಪ ವ್ಯವಸಾಯಗಾರರಾದ ಕಾರಣ ಆದಾಯ ಕಡಿಮೆ ತೋರಿಸಿ ಪದವಿಗೆ ಸೇರಿಸಲು ನನ್ನನ್ನು ದತ್ತು ನೀಡಿರುತ್ತಾರೆ ಎಂದರೆ ಸರಿಯಲ್ಲ. ರಂಗಯ್ಯ ರವರ ಯಾವುದೇ ಆಸ್ತಿಯನ್ನು ನಾನು ಪಡೆದುಕೊಂಡಿಲ್ಲ. ನನ್ನ ತಂದೆ ಆರ್ಥಿಕವಾಗಿ ಶಕ್ತರಾಗಿದ್ದರು ಸಹಃ ಸರ್ಕಾರಕ್ಕೆ ಮೋಸ ಮಾಡುವ ಉದ್ದೇಶದಿಂದ ದತ್ತು ಪತ್ರ ಮಾಡಿಸಿಕೊಂಡು ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ದಾವಾ ಅನುಸೂಚಿ ಬಿ ಸ್ವತ್ತು ರಾಷ್ಟ್ರೀಯಾ ಹೆದ್ದಾರಿಗೆ ಸ್ವಾಧೀನವಾಗಿರುವ ವಿಚಾರ ಗೊತ್ತಿದ್ದರು ಸಹ ವಾದಿಯ ಹೆಸರಿಗೆ ಕ್ರಯ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಒಪ್ಪಂದ ಕರಾರು ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ. ಸದರಿ ಕ್ರಯ ಒಪ್ಪಂದ ಕರಾರು ಪತ್ರಕ್ಕೆ ನನ್ನ ಅಣ್ಣ 1 ನೇ ಪ್ರತಿವಾದಿ ಸಾಕ್ಷಿಯಾಗಿ ಸಹಿ ಮಾಡಿಲ್ಲ ಎಂದರೆ ಸರಿ. ನಾವು ಸುಳ್ಳು ಕ್ರಯ ಒಪ್ಪಂದ ಕರಾರು ಪತ್ರವನ್ನು ಮಾಡಿಸಿ ನಂತರ ವಾದಿಯಿಂದ ದಾನ

ಪತ್ರವನ್ನು ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಸೇರಿಕೊಂಡು ವಾದಿಗೆ ರಾಷ್ಟ್ರೀಯಾ ಹೆದ್ದಾರಿಗೆ ಹೋಗಿರುವ ಬಿ ಅನುಸೂಚಿ ಸ್ವತ್ತಿನ ಒಪ್ಪಂದ ಕ್ರಯ ಕರಾರು ಪತ್ರ ಮಾಡಿಕೊಟ್ಟು ಅಧಿಕ ಮಾರುಕಟ್ಟೆ ಮೌಲ್ಯ ಹೊಂದಿರುವ ಎ ಅನುಸೂಚಿ ಸ್ವತ್ತನ್ನು ದಾನ ಪತ್ರದ ಮೂಲಕ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

ನಾನು ಮೂರು ಮದುವೆಯಾಗಿರುತ್ತೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಒಂದು ವಿಚ್ಛೇಧನವಾಗಿರುತ್ತದೆ, 2 ನೇ ಪತ್ನಿ ಮೃತಪಟ್ಟಿರುತ್ತಾರೆ, ಈಗ ಮರು ವಿವಾಹವಾಗಿರುತ್ತೇನೆ. ನನ್ನ 2 ನೇ ಪತ್ನಿಯು ಖಿನ್ನತೆಗೊಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ನನ್ನ ಈಗಿನ ಪತ್ನಿಯು ಕಡೂರಿನ ಕಲುಬಿಂಗಿ ತಮ್ಮಯ್ಯ ರವರ ಅಣ್ಣ ಗೋವಿಂದಪ್ಪ ರವರ ಮೊಮ್ಮಗಳು. ಸದರಿ ಕಲುಬಿಂಗಿ ತಮ್ಮಯ್ಯ ರವರು ನಾನು ಹಾಜರುಪಡಿಸಿರುವ ವಿಲ್ ಗೆ ಸಾಕ್ಷಿಯಾಗಿ ಸಹಿ ಮಾಡಿದ್ದರು ಎಂದರೆ ಸರಿ. ಸದರಿ ವಿಲ್ ಪೋರ್ಜರಿ ವಿಲ್ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಲ್ ಗೆ ನನ್ನ ನೈಸರ್ಗಿಕ ತಾಯಿಯ ತಮ್ಮನಾದ ಕೆ.ಇ.ಹಿರಿಯಣ್ಣರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ಕೆ.ಇ.ಹಿರಿಯಣ್ಣ ಮತ್ತು ವಾದಿಗೂ ಮೊದಲಿನಿಂದಲೂ ತೋಟ ಮತ್ತು ಸೈಟಿನ ವಿಚಾರವಾಗಿ ವೈಮನಸ್ಸು ಇದ್ದು ಸಂಬಂಧ ಚೆನ್ನಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯು ಅವರ ಎಮ್ಮೆದೊಡ್ಡಿಯಲ್ಲಿ ಇದ್ದ ಜಮೀನನ್ನು ಕೆ ಇ ಹಿರಿಯಣ್ಣ ರವರಿಗೆ ಇತ್ತೀಚೆಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕೆ ಇ ಹಿರಿಯಣ್ಣ ರವರು ವಾದಿಗೆ ವಿಭಾಗದಲ್ಲಿ ಬಂದಿದ್ದ ರಾಜೇಂದ್ರ ಸಾಮಿಲ್ ಪಕ್ಕದಲ್ಲಿ ಇದ್ದ ಸೈಟುಗಳು ನನಗೆ ಬೇಕು ಎಂದು ಕೇಳಿದ್ದು, ವಾದಿಯು ನಿರಾಕರಿಸಿದ್ದರಿಂದ ಅವರಿಬ್ಬರ ನಡುವೆ ವೈಮನಸ್ಸು ಇದೆ ಎಂದರೆ ಸರಿಯಲ್ಲ. ವಾದಿ ಮತ್ತು ಕೆ ಇ ಹಿರಿಯಣ್ಣ ರವರ ನಡುವೆ ವೈಮನಸ್ಸು / ದ್ವೇಷ ಇರುವ ಕಾರಣದಿಂದಲೇ ಅವರು ವಿಲ್ ಗೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ನೈಸರ್ಗಿಕ ತಂದೆಗೆ 6 ವರ್ಷದಿಂದ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ನನ್ನ ನೈಸರ್ಗಿಕ ತಂದೆಗೆ ಎದೆ ಸಂಬಂಧಿತ ಖಾಯಿಲೆ, ರಕ್ತದ ಒತ್ತಡ, ಮಧುಮೇಹ, ಕಿಡ್ನಿ ಸಮಸ್ಯೆ ಇದ್ದ ಕಾರಣ ಅವರ ದೇಹಕ್ಕೆ ಮಿಷನ್ ಅಳವಡಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಂದೆಗೆ ಎದೆ ಸಂಬಂಧಿತ ಖಾಯಿಲೆ,

ರಕ್ತದ ಒತ್ತಡ, ಮಧುಮೇಹ, ಕಿಡ್ನಿ ಸಮಸ್ಯೆ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ನೈಸರ್ಗಿಕ ತಂದೆಗೆ ಹಲವಾರು ಖಾಯಿಲೆಗಳು ಇದ್ದ ಕಾರಣ ಅವರ ಜ್ಞಾಪನ ಶಕ್ತಿ ಇರಲಿಲ್ಲ ಮತ್ತು ದೈಹಿಕವಾಗಿ ಅವರು ಕುಗ್ಗಿದ್ದರು ಎಂದರೆ ಸರಿಯಲ್ಲ. ನನ್ನ ನೈಸರ್ಗಿಕ ತಂದೆಯು ಅವರ ಮರಣ ಪೂರ್ವದಲ್ಲಿ ಯಾರನ್ನು ಸಹ ಗುರುತಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ನೈಸರ್ಗಿಕ ತಂದೆಯು ಹಾಸಿಗೆ ಹಿಡಿದಿದ್ದು, ಅದನ್ನು ದುರುಪಯೋಗಪಡಿಸಿಕೊಂಡು ಪೋರ್ಜರಿ ವಿಲ್ ಅನ್ನು ಮಾಡಿ ಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಲ್ ಅನ್ನು ನನ್ನ ಅಣ್ಣನಿಗೆ ಮೋಸ ಮಾಡುವ ಉದ್ದೇಶದಿಂದ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನ್ನ ಅಣ್ಣನಿಗೆ 2018 ರಲ್ಲಿಯೇ ಅವರ ಪಾಲನ್ನು ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ.

ನನ್ನ ನೈಸರ್ಗಿಕ ತಂದೆಯು ನನ್ನನ್ನು ಶಾಲೆಗೆ ಸೇರಿಸುವಾಗ ಸುಳ್ಳಾಗಿ ಜೇನು ಕುರುಬ (ಎಸ್ ಟಿ) ಜಾತಿ ಎಂದು ನಮೂದಿಸಿ ಶಾಲೆಗೆ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನ್ನ ಶಾಲಾ ದಾಖಲೆಗಳಲ್ಲಿ ಕುರುಬ ಎಂದು ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ಕುರುಬ ಜಾತಿಯನ್ನು ಸರ್ಕಾರದವರು ಪ್ರವರ್ಗ – II ಎ ಎಂಬುದಾಗಿ ಮಾಡಿರುತ್ತದೆ ಎಂದರೆ ಸರಿ.

ವಾದಿಯು ಹಾಜರುಪಡಿಸಿರುವ ನಿಪಿ 11 ರ ಶಾಲಾ ದಾಖಲಾತಿ ದೃಢೀಕರಣ ಪತ್ರದಲ್ಲಿ ನನ್ನ ಜಾತಿ ಜೇನು ಕುರುಬ (ಎಸ್ ಟಿ) ಎಂಬುದಾಗಿ ನಮೂದು ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದು ತಪ್ಪು ನಮೂದು ಆಗಿತ್ತು, ಸದರಿ ತಪ್ಪನ್ನು ನನ್ನ ತಂದೆಯು ತಿದ್ದುಪಡಿ ಮಾಡಿಸಿ ನನ್ನ ಮುಂದುವರೆದ ಶಾಲಾ ದಾಖಲೆಗಳಲ್ಲಿ ಕುರುಬ ಎಂಬುದಾಗಿ ಮಾತ್ರ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ 12 ರಲ್ಲಿಯು ಸಹಃ ನನ್ನ ಜಾತಿ ಜೇನು ಕುರುಬ (ಎಸ್ ಟಿ) ಎಂಬುದಾಗಿ ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಅರಸೀಕೆರೆ ಶಾಲೆಯಲ್ಲಿ ಆ ರೀತಿ ತಪ್ಪು ನಮೂದು ಆಗಿತ್ತು, ನಂತರ ನನ್ನ ಮುಂದಿನ ಶಾಲಾ ದಾಖಲೆಗಳಲ್ಲಿ ತಿದ್ದುಪಡಿಯಾಗಿರುತ್ತದೆ.

ನಿಪಿ 13 ರಲ್ಲಿಯೂ ಸಹ ನನ್ನ ತಂದೆಯ ಹೆಸರು ತಿದ್ದುಪಡಿಯಾಗಿದೆ ಎಂದರೆ ಸರಿ, ಸಾಕ್ಷಿಯು ನಿಪಿ 13 ರ ಷರಾದಲ್ಲಿ ಸರ್ಕಾರದ ಆದೇಶದಂತೆ ತಿದ್ದುಪಡಿ ಮಾಡಲಾಗಿರುವ ಬಗ್ಗೆ ನಮೂದು ಇದೆ ಎಂದು ನುಡಿಯುತ್ತಾರೆ. ಸರ್ಕಾರದ ತಿದ್ದುಪಡಿ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು ಅದು ತುಂಬಾ ಹಳೆಯ ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ.

ಈ ದಾಖಲೆಗಳಲ್ಲಿ ಎಸ್ ಟಿ ಎಂಬುದಾಗಿ ಸರ್ಕಾರಕ್ಕೆ ತೋರಿಸಿ ಹಾಗೂ ಆ ಪ್ರಯುಕ್ತವಾಗಿ ಬರುವ ಸೌಲಭ್ಯಗಳನ್ನು ದುರುದ್ದೇಶಗಳಿಂದ ಪಡೆಯಲು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಮುಂದಿನ ಸುನಾವಣಾ ದಿನಾಂಕದಂದು ಸಂಪೂರ್ಣ ಪಾಟೀ ಸವಾಲನ್ನು ಪೂರ್ಣಗೊಳಿಸಬೇಕು ಎಂಬ ಷರತ್ತಿನ ಮೇರೆಗೆ ಅನುಮತಿ ನೀಡಿ ಮು.ಪಾ.ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,
ಸಹಿ/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.